**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ ಮೂಡಿಗೆರೆ**

**ಸಿ.ಸಿ.ನಂಬರ್:475/2014**

ಸಿಡಬ್ಲ್ಯೂ: 9
ಪಿಡಬ್ಲ್ಯೂ: 5

| | | |
|---|---|---|
| ಸಾಕ್ಷಿಯ ಹೆಸರು | : | ಎಂ.ಎನ್. ಶ್ರೀನಿವಾಸ್ |
| ತಂದೆಯ ಹೆಸರು | : | ನಾರಾಯಣಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಉಪ ನೋಂದಣಾಧಿಕಾರಿಗಳು |
| ವಾಸಸ್ಥಳ | : | ಬೆಂಗಳೂರು. |

ಇಂದು ದಿನಾಂಕ:26.05.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ:** ಮಾನ್ಯ ಎಪಿಪಿಯವರಿಂದ:

ನಾನು 2014 ರಲ್ಲಿ ಮೂಡಿಗೆರೆ ತಾಲ್ಲೂಕಿನಲ್ಲಿ ಉಪನೊಂಂದಣಾದಿಕಾರಿ ಎಂದು ಕರ್ತವ್ಯ ನಿರ್ವಹಿಸಿದ್ದೆ.

ಈ ಪ್ರಕರಣದಲ್ಲಿ ಮೂಡಿಗೆರೆ ಪೊಲೀಸರು ನನಗೆ ಕೆಲವು ದಾಖಲಾತಿಗಳನ್ನು ಪೂರೈಸಲು ನನಗೆ ನೋಟಿಸು ನೀಡಿದ್ದು, ಅದರಂತೆ ನಾನು ದಿನಾಂಕ:-05.02.2014 ರಂದು ಪೊಲೀಸರಿಗೆ ಅವರು ಕೋರಿದ್ದ ದಾಖಾಲಾತಿಗಳನ್ನು ಪೂರೈಸಿರುತ್ತೇನೆ. ಸಾಕ್ಷಿಯು ದಿನಾಂಕ:16.01.2014 ರಂದು ಪೊಲೀಸರು ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು, ದಿನಾಂಕ:-05.02.2014 ರಂದು ನೀಡಿದ ಉತ್ತರ ಮತ್ತು ಸದರಿ ಪತ್ರದೊಂದಿಗೆ ನೀಡಿದ ಪ್ರಮಾಣಪತ್ರ, ಫಾರಂ ನಂ.1, ಅಸೆಸ್‌ಮೆಂಟ್ ಎಕ್ಸ್ ಟ್ರಾಕ್ಟ್, ಡಿಮಾಂಡ್ ರಿಜಿಸ್ಟರ್ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ, ಅವುಗಳನ್ನು ಕ್ರಮವಾಗಿ ನಿಪಿ-20 ರಿಂದ 25 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:** ಆರೋಪಿ ಪರ ಶ್ರೀ ಕೆ.ಎಸ್.ಎ ವಕೀಲರಿಂದ:

**1.** ನಾನು ಯಾವ ದಾಖಾಲಾತಿಗಳನ್ನು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ನಾನು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ನೋಂದಣಿ ಪತ್ರ ಯಾವ ಯಾವ ವ್ಯಕ್ತಿಗಳ ನಡುವೆ ಆಗಿದ್ದು ಎಂದು ನಾನು ನೋಡಿದರೆ ಹೇಳಬಲ್ಲೆ. ದಾಖಾಲಾತಿಗಳ ನಕಲನ್ನು ದೃಡೀಕರಣಪಡಿಸಿ ನಾನು ಪೊಲೀಸರಿಗೆ ನೀಡಿರುತ್ತೇನೆ. ನೋಂದಣಿ ಮಾಡುವಾಗ ನೀಡಿದ ದಾಖಲಾತಿಗಳನ್ನು ಕೊಡುವಂತೆ ಪೊಲೀಸರು ಕೋರಿದ್ದರು. ಆ ಪತ್ರದ ನೋಂದಣಿ ಮಾಡಿದ ದಿನಾಂಕ ನನಗೆ ನೆನಪಿಲ್ಲ. ಪೊಲೀಸರಿಗೆ ನಾನು ನನ್ನ ಹೇಳಿಕೆ ನೀಡಿಲ್ಲ. ಯಾವ ದಾಖಾಲಾತಿಗಳ ಆದಾರದ ಮೇಲೆ ನೋಂದಣಿಯಾಗಿದೆ ಎಂದು ದಾಖಲೆಗಳನ್ನು ನೋಡಿದರೆ ಹೇಳಬಲ್ಲೆ. ನಾನು ನ್ಯಾಯಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ